## ಅಂಗೈಯಲ್ಲಿ ಅರಮನೆ

### ಎಚ್ಚರ ತಪ್ಪಿಸೋ ಕಚೇರಿ

ಹೊಸದಾಗಿ ಕೆಲಸಕ್ಕೆ ಸೇರಿದ್ದ ಲಕ್ಷ್ಮಮ್ಮನ ಬಳಿ ಮಾತನಾಡುತ್ತಾ ಕೇಳಿದೆ, 'ನಿನ್ನ ಮಗ ಎಲ್ಲಿ ಕೆಲಸ ಮಾಡ್ತಾ ಇದ್ದಾನೆ?' ಎಂದು. ಕಸ ಮೂಲೆಗೆ ಮಾಡುತ್ತಾ ಹೇಳಿದಳು, 'ಎಚ್ಚರ ತಪ್ಪಿಸೋ ಆಫೀಸ್ನಾಗೆ ಕೆಲ್ಸ ಮಾಡ್ತಾನೆ' ಅಂತ. ಅವಳ ಮಾತು ಕೇಳಿ ಆ ಕ್ಷಣಕ್ಕೆ ದಿಗ್ಭ್ರಮೆಯಾದಂತಾಯಿತು. ಆಮೇಲೆ ಬಿಡಿಸಿ ಕೇಳಿದಾಗ ಗೊತ್ತಾಗಿದ್ದು, ಅವಳ ಮಗ ಖಾಸಗಿ ಆಸ್ಪತ್ರೆಯೊಂದರ ಅನಸ್ತೇಶಿಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾನೆ ಅಂತ!

**ಕೆ. ಲೀಲಾ ಶ್ರೀನಿವಾಸ್**





### ಸ್ಮಾಲ್ ಆಂಕಲ್ಸ್

ನನ್ನ ಅಕ್ಕನ ಮಗ ಅವ್ಯಾನ್ ಆಗ ತಾನೆ ಪ್ಲೇ ಸ್ಕೂಲಿಗೆ ಹೊರಟಿದ್ದ. ಹೊಸ ಹೊಸ ಪದ ಹೇಳುವುದನ್ನು, ಬಣ್ಣಗಳ ಗುರುತಿಸುವುದನ್ನು ಕಲಿತಿದ್ದ. ಅಮ್ಮ ಅಂದ್ರೆ ಮದರ್, ಅಪ್ಪ ಅಂದ್ರೆ ಫಾದರ್, ಅಜ್ಜ ಅಂದ್ರೆ ಗ್ರ್ಯಾಂಡ್ ಫಾದರ್ ಅನ್ನುವುದನ್ನೆಲ್ಲಾ ಶಾಲೆಯಲ್ಲಿ ಹೇಳಿಕೊಟ್ಟಿದ್ದರು. 'ಆಂಟಿ–ಅಂಕಲ್' ಅಂದರೆ ಯಾರು ಎನ್ನುವುದನ್ನೂ ಹೇಳಿಕೊಟ್ಟಿದ್ದರು. ಒಂದು ಭಾನುವಾರ ನಮ್ಮ ಮನೆಯ ಮಹಡಿಯ ಕಿಟಕಿಯಿಂದ ಕೆಳಗೆ ನೋಡಿದವ, 'ಅಜ್ಜಿ ಅಜ್ಜಿ, ಸ್ಮಾಲ್ ಅಂಕಲ್ಸ್ ಆರ್ ಪ್ಲೇಯಿಂಗ್' ಎಂದು ಹೇಳಿದಾಗ ಮನೆಯಲ್ಲಿದ್ದವರೆಲ್ಲಾ ನಕ್ಕಿದ್ದಾಯ್ತು. ಅನಂತರ, 'ಅವರು ಸ್ಮಾಲ್ ಅಂಕಲ್ಸ್ ಅಲ್ಲ, ಬಾಯ್ಸ್' ಎಂದು ಹೇಳಿಕೊಟ್ಟೆ.

**ರೇವತಿ ಅಗ್ನಿಹೋತ್ರಿ**